## ಮಧ್ಯಂತರ ಅರ್ಜಿ – 6 ರ ಮೇಲೆ ಆದೇಶ

ಮೇಲ್ಮನವಿದಾರರ ಪರವಾಗಿ ದಿ.ಪ್ರ.ಸಂ. ಕಲಂ.151 ರಡಿ ಸದರಿ ಅರ್ಜಿಯನ್ನು ಸಲ್ಲಿಸಿ ಈ ನ್ಯಾಯಾಲಯದಲ್ಲಿ ಜಾರಿಯಲ್ಲಿರುವ ಆರ್.ಎ.ನಂ.10020/2020 ರ ಮೇಲ್ಮನವಿಯನ್ನು ಈ ಮೇಲ್ಮನವಿಯೊಂದಿಗೆ ಒಟ್ಟಿಗೆ ಸೇರಿಸಬೇಕೆಂದು ಕೋರಿ ಈ ಅರ್ಜಿಯನ್ನು ಸಲ್ಲಿಸಿರುತ್ತಾರೆ.

2. ಸದರಿ ಮೇಲ್ಮನವಿದಾರರು ತಮ್ಮ ಅರ್ಜಿಯ ಲಗತ್ತು ಪ್ರಮಾಣಪತ್ರದಲ್ಲಿ ಸದರಿ 7 ನೇ ಪ್ರತಿವಾದಿಯು ದಾವಾಸ್ತಿಯ ಭಾಗಶಃ ಖರೀದಿದಾರರಾಗಿದ್ದು ಆರ್,ಎ.ನಂ.10020/2020 ರ ಮೇಲ್ಮನವಿಯನ್ನು ಸಲ್ಲಿಸಿದ್ದು ಸದರಿ ಎರಡೂ ಮೇಲ್ಮನವಿಗಳನ್ನು ಓ.ಎಸ್.ನಂ.494/2007 ರ ತೀರ್ಪು ಹಾಗೂ ಡಿಕ್ರಿಯ ವಿರುದ್ಧ ಸಲ್ಲಿಸಿದ್ದು ಆ ಕಾರಣ ಎರಡೂ ಮೇಲ್ಮನವಿಗಳಲ್ಲಿ ವ್ಯತಿರಿಕ್ತ ಆದೇಶ ಹಾಗೂ ತೀರ್ಪುಗಳನ್ನು ತಡೆಯುವ ಉದ್ದೇಶದಿಂದ ಒಟ್ಟಿಗೆ ನಿರ್ಣಯಿಸುವ ಅವಶ್ಯಕತೆಯಿರುತ್ತದೆಂದು, ಆದ್ದರಿಂದ ಎರಡೂ ಮೇಲ್ಮನವಿಗಳನ್ನು ಒಟ್ಟಿಗೆ ಸೇರಿಸಿ ಒಟ್ಟಿಗೆ ವಾದ ಆಲಿಸಿ ಒಟ್ಟಿಗೆ ನಿರ್ಣಯಿಸಬೇಕೆಂದು ಕೋರಿರುತ್ತಾರೆ.

3. ಸದರಿ ಅರ್ಜಿಯ ನೋಟೀಸು ಜಾರಿಯಾಗಿದ್ದರೂ ಸಹ 7 ನೇ ಎದುರುದಾರರು ಯಾವುದೇ ತಕರಾರು ಸಲ್ಲಿಸಿರುವುದಿಲ್ಲ.

4. ಮೇಲ್ಮನವಿದಾರರ ವಕೀಲರ ವಾದವನ್ನು ಆಲಿಸಲಾಯಿತು.

5. ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಲಾಯಿತು.

6. ಈ ಕೆಳಕಂಡ ಅಂಶಗಳು ನ್ಯಾಯಾಲಯದ ನಿರ್ಣಯಕ್ಕೆ ಕಂಡುಬಂದಿರುತ್ತವೆ:

1) ಸದರಿ ಮೇಲ್ಮನವಿದಾರರ ಅರ್ಜಿಯನ್ನು ಪುರಸ್ಕರಿಸಿ ಅರ್ಜಿಯಲ್ಲಿ ಕೋರಿದಂತೆ ಆರ್.ಎ.ನಂ.10020/2020 ರ ಮೇಲ್ಮನವಿಯನ್ನು ಈ ಮೇಲ್ಮನವಿಯೊಂದಿಗೆ ಒಟ್ಟಿಗೆ ಸೇರಿಸಿ ನಿರ್ಣಯಿಸಲು ಸಮರ್ಥನೀಯವಾದ ಕಾರಣಗಳನ್ನು ನೀಡಿರುತ್ತಾರೆಯೇ?

2) ಆದೇಶವೇನು?

7. ಅರ್ಜಿಯ ಅಂಶಗಳನ್ನು ಮತ್ತು ನ್ಯಾಯಾಲಯದ ಮುಂದಿರುವ ದಾಖಲೆಗಳನ್ನು ಪರಿಶೀಲಿಸಿ, ಮೇಲ್ಮನವಿದಾರರ ವಕೀಲರ ವಾದವನ್ನು ಆಲಿಸಿ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಃ

1ನೇ ಅಂಶ : ಸಕರಾತ್ಮಕವಾಗಿ

2ನೇ ಅಂಶ : ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

8. **1 ನೇ ಅಂಶಃ-** ವಿಚಾರಣಾ ನ್ಯಾಯಾಲಯದಲ್ಲಿ ವಾದಿಯು ಸಲ್ಲಿಸಿದ್ದ ಓ.ಎಸ್.ನಂ.494/2007 ರ ದಾವೆಯನ್ನು ದಿನಾಂಕಃ 13-09-2019 ರಂದು ಡಿಕ್ರಿಗೊಳಿಸಿ ನೀಡಿದ ತೀರ್ಪು ಹಾಗೂ ಡಿಕ್ರಿಯನ್ನು ಪ್ರಶ್ನಿಸಿ ಸದರಿ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ.

9. ಮೇಲ್ಮನವಿಯು ಜಾರಿಯಲ್ಲಿದ್ದ ಸಮಯದಲ್ಲಿ 7 ನೇ ಪ್ರತಿವಾದಿಯು ಸದರಿ ವಿಚಾರಣಾ ನ್ಯಾಯಾಲಯದ ತೀರ್ಪು ಹಾಗೂ ಡಿಕ್ರಿಯ ವಿರುದ್ಧ ಆರ್.ಎ.ನಂ.10020/2020 ರ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆಂದು, ಆದ್ದರಿಂದ ಎರಡೂ ಮೇಲ್ಮನವಿಗಳನ್ನು ಒಟ್ಟಿಗೆ ಸೇರಿಸಿ ಸಾಮಾನ್ಯ ತೀರ್ಪು ನೀಡುವಂತೆ ಕೋರಿರುತ್ತಾರೆ.

10. ಅಲ್ಲದೇ ಸದರಿ 7 ನೇ ಪ್ರತಿವಾದಿಯು ದಾವಾಸ್ತಿಯ ಭಾಗಶಃ ಅಂಶವನ್ನು ಖರೀದಿಸಿ ನಂತರ ಪ್ರಸ್ತಾಪಿತ 8 ನೇ ಎದುರುದಾರರಿಗೆ ಮಾರಾಟ ಮಾಡಿರುತ್ತಾರೆಂದು ತಿಳಿಸಿ ಸದರಿಯವರನ್ನು ಮೇಲ್ಮನವಿಯಲ್ಲಿ ಎದುರುದಾರರನ್ನಾಗಿ ಸೇರ್ಪಡಿಸಬೇಕೆಂದು ಕೋರಿರುತ್ತಾರೆ.

11. ಅಲ್ಲದೇ ಎರಡೂ ದಾವೆಗಳಲ್ಲಿ ಪಕ್ಷಗಾರರು ಒಬ್ಬರೇ ಇರುವುದರಿಂದ ಮತ್ತು ಒಂದೇ ದಾವೆಯ ತೀರ್ಪು ಹಾಗೂ ಡಿಕ್ರಿಯ ವಿರುದ್ಧ ಮೇಲ್ಮನವಿಯನ್ನು ಸಲ್ಲಿಸಿರುವುದರಿಂದ ಸದರಿ ಅರ್ಜಿಯನ್ನು ಪುರಸ್ಕರಿಸಿ 7 ನೇ ಪ್ರತಿವಾದಿಯಿಂದ ದಾವಾಸ್ತಿಯ ಅಂಶವನ್ನು ಖರೀದಿಸಿದ 8 ನೇ ಪ್ರಸ್ತಾಪಿತ ಎದುರುದಾರರನ್ನು ಮೇಲ್ಮನವಿಯಲ್ಲಿ ಎದುರುದಾರರನ್ನಾಗಿ ಸೇರ್ಪಡಿಸುವ ಅವಶ್ಯಕತೆಯಿರುತ್ತದೆಂದು, ಸದರಿ ಅರ್ಜಿಯನ್ನು ಪುರಸ್ಕರಿಸಿರುವುದರಿಂದ ಎರಡೂ ಮೇಲ್ಮನವಿಗಳನ್ನು ಒಟ್ಟಿಗೆ ಸೇರಿಸಿ ಸಾಮಾನ್ಯ ತೀರ್ಪು ನೀಡುವುದರಿಂದ ಎರಡೂ ಮೇಲ್ಮನವಿಗಳಲ್ಲಿನ ವ್ಯತಿರಿಕ್ತ ಆದೇಶವನ್ನು ತಡೆಗಟ್ಟಬಹುದೆಂದು ನ್ಯಾಯಾಲಯದ ಗಮನಕ್ಕೆ ಕಂಡುಬರುತ್ತದೆ. ಇದರಿಂದ ಮೇಲ್ಮನವಿಯ ಉಭಯಪಕ್ಷಗಾರರಿಗೆ ಯಾವುದೇ ಹಾನಿ ಅಥವಾ ನಷ್ಟವುಂಟಾಗುವುದಿಲ್ಲ. ಬದಲಾಗಿ ಎರಡೂ ಮೇಲ್ಮನವಿಗಳಲ್ಲಿ ಪ್ರತ್ಯೇಕವಾಗಿ ವಾದ ಮಂಡಿಸುವುದನ್ನು ತಪ್ಪಿಸಬಹುದಾಗಿರುತ್ತದೆ ಹಾಗೂ ನ್ಯಾಯಾಲಯದ ಸಮಯವನ್ನೂ ಸಹ ಉಳಿಸಬಹುದಾಗಿರುತ್ತದೆ.

12. ಅಲ್ಲದೇ ಎದುರುದಾರರಿಗೆ ನೋಟೀಸು ಜಾರಿಯಾಗಿದ್ದರೂ ಸಹ ಹಾಜರಾಗಿ ತಕರಾರು ಸಲ್ಲಿಸಿರುವುದಿಲ್ಲ. ಒಂದು ವೇಳೆ ಸದರಿ ಎದುರುದಾರರಿಗೆ ಯಾವುದೇ ಹಾನಿ ಅಥವಾ ನಷ್ಟವುಂಟಾಗಿದ್ದಲ್ಲಿ ಅದನ್ನು ತಕರಾರಿನಲ್ಲಿ ತಿಳಿಸಲು ಅವಕಾಶವಿರುತ್ತದೆ. ಅಲ್ಲದೇ ಸೂಕ್ತ ಪರಿಹಾರವನ್ನೂ ಸಹ ನೀಡಲು ನ್ಯಾಯಾಲಯಕ್ಕೆ ಅವಕಾಶವೂ ಸಹ ಇರುತ್ತದೆ. ಸದರಿ ಅಂಶಗಳನ್ನು ಪರಿಗಣಿಸಿ **1 ನೇ ಅಂಶವನ್ನು ಸಕರಾತ್ಮಕವಾಗಿ** ಉತ್ತರಿಸಲಾಗಿದೆ.

13. **2 ನೇ ಅಂಶಃ-** 1 ನೇ ಅಂಶದಲ್ಲಿ ತಿಳಿಸಿದ ಕಾರಣಗಳ ಮೇರೆಗೆ ಈ ಕೆಳಕಂಡಂತೆಃ

**ಆದೇಶ**

ಮೇಲ್ಮನವಿದಾರರ ಪರವಾಗಿ ದಿ.ಪ್ರ.ಸಂ. ಕಲಂ.151 ರಡಿ ಸಲ್ಲಿಸಿದ ಮಧ್ಯಂತರ ಅರ್ಜಿ-6 ನ್ನು ಪುರಸ್ಕರಿಸಲಾಗಿದೆ.

ಈ ನ್ಯಾಯಾಲಯದಲ್ಲಿ ಜಾರಿಯಲ್ಲಿರುವ ಆರ್.ಎ.ನಂ.10020/2020 ರ ಮೇಲ್ಮನವಿಯನ್ನು ಈ ಮೇಲ್ಮನವಿಯೊಂದಿಗೆ ಒಟ್ಟಿಗೆ ಸೇರಿಸಲಾಗಿದೆ.

ಉಭಯಪಕ್ಷಗಾರರು ಈ ಮೇಲ್ಮನವಿಯಲ್ಲಿ ವಾದ ಮಂಡಿಸಲು ಆದೇಶಿಸಲಾಗಿದೆ.

**(ರಮೇಶ ದುರುಗಪ್ಪ ಏಕಬೋಟೆ)**
4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ, ಬೆಂಗಳೂರು ಗ್ರಾಮಾಂತರ ಜಿಲ್ಲೆ